# ಕಥೋಪದೇಶ



# ಸತ್ಯದರ್ಶನ

ಸಂಗ್ರಹ : ನಿರುಪಮಾನಂದ, ಕಲೆ : ಸಿದ್ದಲಿಂಗಯ್ಯ ಜೆ.ಸಿ.



ಒಂದು ಬಡ ಕುಟುಂಬದಲ್ಲಿ ಕೂಲಿ ಸಿಕ್ಕಿದರೆ ತುತ್ತು ಊಟ ಮಾಡಬಹುದಿತ್ತು. ಇಲ್ಲವಾದಲ್ಲಿ ಉಪವಾಸವೇ ಗತಿ. ತನ್ನ ಮಗನಾದರೂ ಓದಿ ದೊಡ್ಡವನಾಗಿ ನೌಕರಿ ಹಿಡಿದು ಉತ್ತಮ ಸ್ಥಿತಿಯಲ್ಲಿ ಬಾಳಲಿ ಎಂಬ ಆಸೆಯಿಂದ ತಾಯಿಯೊಬ್ಬಳು ತನ್ನ ಪುಟ್ಟ ಮಗನನ್ನು ಶಾಲೆಗೆ ಕಳುಹಿಸುತ್ತಿದ್ದಳು.

ಆ ಬಾಲಕ ಪ್ರತಿದಿನ ಶಾಲೆಗೆ ಹೋಗುವಾಗ, ದಾರಿಯಲ್ಲೇ ಸಿಗುವ ಅವನ ಸ್ನೇಹಿತನ ಮನೆಯ ಮುಂದೆ ನಿಂತು ಅವನ ಹೆಸರನ್ನು ಕೂಗುತ್ತಿದ್ದನು. ಅವನು ಬಂದಾಗ ಇಬ್ಬರೂ ಜೊತೆಗೂಡಿ ಶಾಲೆಗೆ ಹೋಗುತ್ತಿದ್ದರು. ಒಮ್ಮೊಮ್ಮೆ ಈ ಬಾಲಕ ಕೂಗಿದಾಗ, ಅವನ ಸ್ನೇಹಿತನ ತಾಯಿ ಮನೆಯೊಳಗಿನಿಂದಲೇ ಉತ್ತರಿಸುತ್ತಿದ್ದಳು: "ಸ್ವಲ್ಪ ಇರು, ಅವನು ತಿಂಡಿ ತಿನ್ನುತ್ತಿದ್ದಾನೆ, ಬೇಗ ಬಂದ್ಬಿಡ್ತಾನೆ." ಎಂದು. ಮತ್ತೊಮ್ಮೆ ಹೇಳುತ್ತಿದ್ದಳು, "ತಾಳಪ್ಪ ಮರೀ, ಅವನು ಹಾಲು ಕುಡಿಯುತ್ತಿದ್ದಾನೆ ಬಂದ್ಬಿಡ್ತಾನೆ" ಎಂದು. ಈ ಬಡ ಬಾಲಕ ಚಿಂತಿಸಲಾರಂಭಿಸಿದ, ಹಾಲು ಎಂದರೇನು? ನನ್ನ ಸ್ನೇಹಿತನಿಗೆ ಅವನ ತಾಯಿ ದಿನವೂ ಹಾಲು ಕೊಡುತ್ತಿದ್ದಾರೆ. ಆದರೆ, ನಮ್ಮಮ್ಮ ನನಗೇಕೆ ಹಾಲು ಕೊಡುವುದಿಲ್ಲ. ಹಾಲು ಹೇಗಿರುತ್ತದೆ" ಎಂದು. ಅಂದು ಮನೆಗೆ ಬಂದವನೇ ತನ್ನ ತಾಯಿಗೆ ದುಂಬಾಲು ಬಿದ್ದ, "ಅಮ್ಮಾ, ಹಾಲು ಎಂದರೇನಮ್ಮಾ, ನನ್ನ ಸ್ನೇಹಿತ ದಿನವೂ ಶಾಲೆಗೆ ಬರುವಾಗ ಹಾಲು ಕುಡಿದುಬರುತ್ತಾನಂತಮ್ಮ, ನನಗೇಕೆ ನೀನು ಕೊಡುತ್ತಿಲ್ಲ?" ಆ ತಾಯಿ ಧರ್ಮಸಂಕಟಕ್ಕೆ ಸಿಲುಕಿಕೊಂಡಳು. ಮಗುವಿಗೆ ತನ್ನ ಅಸಹಾಯಕತೆಯನ್ನು ಅರ್ಥಮಾಡಿಸಲಾಗುವುದಿಲ್ಲ, ಹಾಲು ಒದಗಿಸಲು ಶಕ್ತಿಯಿಲ್ಲ. ಕೊನೆಗೆ ಒಂದು ಉಪಾಯ ಕಂಡುಕೊಂಡಳು. ಪ್ರತಿದಿನ ಅಕ್ಕಿ ತೊಳೆದ ನೀರನ್ನು ಒಂದು ಲೋಟದಲ್ಲಿ ತೆಗೆದಿಟ್ಟು ಬಾಲಕ ಶಾಲೆಗೆ ಹೋಗುವಾಗ ತಗೊ ಹಾಲು ಎಂದು ಕೊಡುತ್ತಿದ್ದಳು. ಆ ಬಾಲಕ, ಅದನ್ನೇ ಹಾಲು ಎಂದು ನಂಬಿ ಕುಡಿಯುತ್ತಿದ್ದ.

ಒಮ್ಮೆ ಆ ಬಾಲಕ ಶಾಲೆಗೆ ಹೋಗುವಾಗ ಎಂದಿನಂತೆ, ತನ್ನ ಸ್ನೇಹಿತನ ಮನೆ ಮುಂದೆ ನಿಂತು ಅವನ ಹೆಸರನ್ನು ಕರೆದ. ಅಂದು ಆ ಸ್ನೇಹಿತನ ತಾಯಿ ಒಳಗಿನಿಂದಲೇ ಈ ಬಾಲಕನನ್ನು, "ಏನಪ್ಪಾ ಪ್ರತಿದಿನ ಹೊರಗೇ ನಿಂತು ಕರೆಯುತ್ತೀಯೆ. ಒಳಗೆ ಬಾರೋ" ಎಂದು ಕರೆದು, ತನ್ನ ಮಗನೊಡನೆ ಈ ಬಾಲಕನಿಗೂ ಒಂದು ಲೋಟ ಹಾಲನ್ನು ಕುಡಿಯಲು ಕೊಟ್ಟರು. ಇದೇ ಮೊದಲ ಬಾರಿಗೆ ಹಾಲನ್ನು ಕಂಡ ಬಾಲಕ ಆಶ್ಚರ್ಯದಿಂದ ದಂಗಾದ. ಕುಡಿದು ನೋಡಿದ. ಅದರ ಸ್ವಾದವನ್ನು ಸವಿದ. ಅಂದು ಶಾಲೆಗೆ ಹೋಗದೆ ನೇರ ಮನೆಗೆ ನಡೆದ. ತಾಯಿಯನ್ನು ಕೇಳಿದ: "ಅಮ್ಮಾ, ಹಾಲು ಎಂದು ನನಗೆ ದಿನವೂ ಕುಡಿಯಲು ನೀನು ಕೊಡುತ್ತಿದ್ದುದು ಏನು?" ತಕ್ಷಣ ಆಕೆಗೆ ಅರ್ಥವಾಯಿತು, ಮಗನು ಎಲ್ಲಿಯೋ ಹಾಲಿನ ರುಚಿ ಕಂಡಿದ್ದಾನೆ ಎಂದು. ಬೇರೆ ದಾರಿಯಿಲ್ಲದೆ ಬಾಲಕನಿಗೆ ಆ ಹೆಂಗಸು ತನ್ನ ಪರಿಸ್ಥಿತಿಯನ್ನು ವಿವರಿಸಿ ಹೇಳಿ, ಹಾಲನ್ನು ತಂದುಕೊಡುವ ಯೋಗ್ಯತೆ ಇಲ್ಲದ್ದರಿಂದ ತಾನು ದಿನವೂ ಅಕ್ಕಿ ತೊಳೆದ ನೀರನ್ನು ಆತನ ಸಂತೋಷಕ್ಕಾಗಿ ಕೊಡಬೇಕಾಗಿ ಬಂದಿತೆಂದು ಸಮಾಧಾನ ಹೇಳಿದಳು.

ಎಲ್ಲವನ್ನೂ ಕೇಳಿದ ಬಾಲಕ ಸ್ವಲ್ಪ ಸಮಯ ಗಂಭೀರವಾಗಿ

ನಿಂತು. ನಂತರ ತನ್ನ ತಾಯಿಗೆ ಹೇಳಿದ, “ಅಮ್ಮ, ನನಗೆ ತಿಳಿಯದೆ ಹಾಲು ಕೊಡಬೇಕೆಂದು ನಿನಗೆ ತೊಂದರೆ ಕೊಟ್ಟೆ. ಕ್ಷಮಿಸಮ್ಮಾ. ಆದರೆ, ಇನ್ನುಮೇಲೆ ಆ ಅಕ್ಕಿ ತೊಳೆದ ನೀರನ್ನು ಮಾತ್ರ ನಾನು ಕುಡಿಯುವುದಿಲ್ಲ.”

ಮನುಷ್ಯನಿಗೆ ಸತ್ಯದರ್ಶನವಾದ ನಂತರ, ಯಾವುದೇ ಕಾರಣಕ್ಕೂ ಹಿಂದಿನಂತೆ ಜೀವನ ನಡೆಸಲು ಸಾಧ್ಯವಾಗುವುದೇ ಇಲ್ಲ. ಅವನು ಕಂಡುಂಡ ಸತ್ಯದರ್ಶನ, ಅವನ ಬಾಳಿನಲ್ಲಿ ಪರಿಣಾಮ ಬೀರಿ, ಆ ಮನುಷ್ಯನ ಜೀವನವನ್ನು ಸತ್ಯದ ಬೆಳಕಿನಲ್ಲಿ ರೂಪಿಸಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ✡

## ತೇಲದಿದ್ದರೆ ಶ್ರೀರಾಮನಾಣೆ

**ಸಂಗ್ರಹ : ನಿರುಪಮಾನಂದ ; ಕಲೆ : ಸಿದ್ದಲಿಂಗಯ್ಯ ಜಿ.ಸಿ.**




ಶ್ರೀರಾಮ–ರಾವಣರ ಯುದ್ಧ ಸನ್ನಿಹಿತವಾಗಿತ್ತು. ಎರಡೂ ಕಡೆ ರೋಷಾವೇಶದಿಂದ ಯುದ್ಧ ಸಿದ್ಧತೆಗಳು ನಡೆದಿದ್ದುವು. ರಾಮನ ಕಡೆಯವರಿಗೆ ಸಮುದ್ರವನ್ನು ದಾಟುವ ಬಗೆ ಹೇಗೆ ಎಂಬ ಚಿಂತೆ ಕಾಡಲಾರಂಭಿಸಿತ್ತು. ಕೊನೆಗೂ ಕೈಗೆ ಸಿಕ್ಕ ಕಲ್ಲುಗಳ ಮೇಲೆಲ್ಲಾ ‘ಜೈ ಶ್ರೀರಾಮ’ ಎಂದು ಬರೆದು, ಸಮುದ್ರಕ್ಕೆ ತಂದು ‘ತೇಲದಿದ್ದರೆ ಶ್ರೀರಾಮನಾಣೆ’ ಎಂದು ಹೇಳಿ ನೀರಿಗೆ ಹಾಕುತ್ತಿದ್ದರು, ಅವು ಮುಳುಗದೆ ತೇಲುತ್ತಿದ್ದವು. ಹೀಗೆ ಒಂದರ ಪಕ್ಕ ಒಂದು ಕಲ್ಲನ್ನು ನೀರಿನಲ್ಲಿ ಜೋಡಿಸುತ್ತಾ ಕಪಿಗಳು ಸೇತುವೆಯನ್ನು ನಿರ್ಮಿಸಲಾರಂಭಿಸಿದವು. ಈ ವಿಷಯ ತಿಳಿದು ಲಂಕೆಯ ರಾಕ್ಷಸರಲ್ಲಿ ಕೋಲಾಹಲವುಂಟಾಯಿತು, ಶ್ರೀರಾಮನಾಣೆ ಇಟ್ಟರೆ ಕಲ್ಲುಗಳೇ ತೇಲುತ್ತವೆ, ರಾಮನ ಹೆಸರಿಗೇ ಅಷ್ಟು ಶಕ್ತಿ ಇದೆಯೆಂದರೆ, ಸ್ವತಃ ರಾಮನಿಗೆ ಎಷ್ಟು ಶಕ್ತಿ ಇರಬೇಡ! ಅವರು ಸಮುದ್ರ ದಾಟಿ ಇತ್ತ ಬಂದರೆ ನಮ್ಮೆಲ್ಲರ ಸರ್ವನಾಶ ಖಚಿತವೇ. ಶ್ರೀರಾಮನ ನಾಮಕ್ಕೆ, ಸ್ವತಃ ರಾಮನಿಗೆ ಇರುವ ಶಕ್ತಿ, ನಮ್ಮ ರಾವಣನಿಗೆ, ಅವನ ನಾಮಕ್ಕೆ ಇಲ್ಲ ಎಂದು ಭಯ ಪಡಲಾರಂಭಿಸಿದರು. ಈ ವಿಷಯವನ್ನು ಗುಪ್ತಚಾರರಿಂದ ತಿಳಿದ ರಾವಣ ತನ್ನ ಕಡೆಯವರಲ್ಲಿ ಆತ್ಮವಿಶ್ವಾಸ ತುಂಬುವ ಸಲುವಾಗಿ, ಒಂದು ದಿನ ಲಂಕೆಯ ಎಲ್ಲಾ ರಾಕ್ಷಸರನ್ನೂ, ಆಸ್ಥಾನಿಕರನ್ನೂ, ತನ್ನ ಪತ್ನಿಯನ್ನೂ ಸಮುದ್ರತೀರಕ್ಕೆ ಕರೆದುಕೊಂಡು ಬಂದ. ಒಂದು ಕಲ್ಲನ್ನು ತರಿಸಿ, ಅದರ ಮೇಲೆ ‘ಜೈ ರಾವಣ’ ಎಂದು ಬರೆದು ನೀರಲ್ಲಿ ಬಿಟ್ಟ. ಆಶ್ಚರ್ಯ! ಕಲ್ಲು ಮುಳುಗದೆ ತೇಲಲಾರಂಭಿಸಿತು. ಇದನ್ನು ಕಂಡು ಲಂಕೆಯ ಪ್ರಜೆಗಳಿಗೆ ರೋಮಾಂಚನವಾಯಿತು, ಹರ್ಷದಿಂದ ಹುಚ್ಚರಂತಾದರು. ನಮ್ಮ ರಾವಣ ರಾಮನಿಗಿಂತೇನು ಕಡಿಮೆ, ಬರಲಿ ರಾಮ ಇಲ್ಲಿಗೆ. ಯುದ್ಧದಲ್ಲಿ ಸರಿಯಾಗಿ ಬುದ್ಧಿ ಕಲಿಸುತ್ತೇವೆ, ಎಂದು ಆತ್ಮವಿಶ್ವಾಸದಿಂದ ಹೇಳಲಾರಂಭಿಸಿದರು. ಅಂದು ರಾತ್ರಿ ಮಂಡೋದರಿ, ತನ್ನ ಪತಿ ರಾವಣನನ್ನು ಅನುಮಾನದಿಂದ ಕೇಳಿದಳು. “ನಿಜವಾಗಿಯೂ ನಿಮ್ಮ ನಾಮಕ್ಕೆ ಅಷ್ಟು ಶಕ್ತಿ ಇರುವುದೇ?” ಎಂದು. ಆಗ ರಾವಣ ಹೇಳಿದ: “ಅಯ್ಯೋ ಮರುಳೇ, ಇದನ್ನು ನೀನು ನಂಬಿರುವೆಯಾ? ನಾನು ಕಲ್ಲಿನ ಮೇಲೆ ‘ಜೈ ರಾವಣ’ ಎಂದು ಬರೆದೆ ನಿಜ. ಆದರೆ ನೀರಿನಲ್ಲಿ ಹಾಕುವಾಗ ಮನಸ್ಸಿನಲ್ಲಿ ‘ತೇಲದಿದ್ದರೆ ಶ್ರೀರಾಮನಾಣೆ’ ಎಂದುಕೊಂಡೆ, ತೇಲಿತು” ಎಂದ. ✡